ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಬಿ.ಎಂ.ಆರ್.ಸಿ.ಎಲ್ ನೌಕರರ ಬಡ್ತಿ ಕುರಿತು

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು):-

371 (598) ಮಾನ್ಯ ಉಪ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ (ಬಿ.ಎಂ.ಆರ್.ಸಿ.ಎಲ್)ದಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಖಾಯಂ ಉದ್ಯೋಗಿಗಳು ಎಷ್ಟು ; (ಉದ್ಯೋಗಿಗಳ ಹೆಸರು, ಖಾಯಂ ವಿಳಾಸ, ಹುದ್ದೆಯ ಪದನಾಮ, ಜಾತಿ ಪ್ರವರ್ಗ ಒಳಗೊಂಡಂತೆ ವೃಂದವಾರು ಜ್ಯೇಷ್ಠತಾ ಪಟ್ಟಿಯೊಡನೆ ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ನೌಕರರ ಮುಂಬಡ್ತಿಗೆ ಜ್ಯೇಷ್ಠತೆಯನ್ನು ಪರಿಗಣಿಸದೆ ಆಂತರಿಕ ಸ್ಪರ್ಧಾತ್ಮಕ ಪರೀಕ್ಷೆ ಇಟ್ಟಿರುವುದು ಸರಿಯೇ ;

(ಇ) ಬಿ.ಎಂ.ಆರ್.ಸಿ.ಎಲ್ ಸಂಸ್ಥೆಯು ನೇಮಕಾತಿಗೆ ಕರ್ನಾಟಕ ಸರ್ಕಾರದ ಮಿಸಲಾತಿ ನಿಯಮಗಳನ್ನು ಮಾತ್ರ ಪಾಲಿಸಿ ಮುಂಬಡ್ತಿಗೆ ನಿಯಮಗಳನ್ನು ಪಾಲಿಸದಿರಲು ಕಾರಣಗಳೇನು ;

(ಈ) ಸರ್ಕಾರ ಹಾಗೂ ಸರ್ಕಾರದ ಇತರೆ ನಿಗಮಗಳು ಮುಂಬಡ್ತಿಗೆ ಜೇಷ್ಠತೆಯನ್ನು ಪಾಲಿಸುವಾಗ ಬಿ.ಎಂ.ಆರ್.ಸಿ.ಎಲ್ ಸಂಸ್ಥೆಯವರು ಪರೀಕ್ಷೆ ಇಟ್ಟು Pick and choose ಮಾರ್ಗ ಅನುಸರಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ;

(ಉ) ಈ ತಾರತಮ್ಯವನ್ನು ಸರ್ಕಾರ ಯಾವ ಕಾಲಮಿತಿಯೊಳಗೆ ಬಗೆಹರಿಸಿ ಹಾಲಿ ಇರುವ ನೌಕರರಿಗೆ ಮುಂಬಡ್ತಿ ನೀಡಲಾಗುವುದು?